dc-391
T.P-2

(1)

Reg. B G No. 155

15 - 10 - 1968

ಪ್ರಮುಖ ನರ್ತಮೂನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಪದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 4

SATYAVADI, Daily MYSORE 4

52 nd Year of Publication

ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಕನ್ನಡ ಅಧಿಕೃತ ಭಾಷೆ ಆಗುವ ಕಾಲ ದೂರವಿಲ್ಲ

ಜಗದ್ಗುರುಗಳವರ ವರ್ಧಂತಿ

ಚಿಕ್ಕಮಗಳೂರು— ಶ್ರೀ ಶೃಂಗೇರಿ ಜಗದ್ಗುರುಗಳಿಂದ ಅಕ್ಟೋಬರು 2 ರಿಂದ ಪ್ರಾರಂಭಿಸಲ್ಪಟ್ಟ ಶ್ರೀ ಶಾರದಾಂಬೆಯ ಕೋಟಿ ನಾಮಾರ್ಚನೆಯು, ತಾ || 20 ರಂದು, ಲಲಿತಾ ಹೋಮ ಮುತ್ತು ಪೂರ್ಣಾಹುತಿಯಿಂದ ಸಮಾಪ್ತಿಗೊಳ್ಳುವುದು — ಮಹಾಪೂಜೆಯನ್ನು ನೋಡಲು ದೀರ್ಘಾದ್ಯಂತದಿಂದ ಸಹಸ್ರಗಟ್ಟಲೆ ಜನರು ಬರುತ್ತಿರುವರು — ತಾ || 20 ರಂದು ಜಗದ್ಗುರುಗಳವರ ವರ್ಧಂತಿ ಸೇರಿವೇರುವುದು : ಶಂಕರ ಸೇವಾ ಸಮಿತಿಯು ವಿಸ್ತಾರವಾದ ಏರ್ಪಾಡು ಮಾಡುತ್ತಿದೆ.

★

ಮಹಾರ್ಜ ತೀರ್ಪು

ತುಮಕೂರು— ವಿಧಾನ ಪರಿಷತ್ತಿನ ಜನಸಂಘ ಸದಸ್ಯ ಶ್ರೀ ಯಲ್ಲಪ್ಪಗೌಡ ಪಾಟೀಲರು, ರಾಜ್ಯ ಸರಕಾರ ಶುಹಾಜನ ಕಮಿಷ ತೀರ್ಪು ನ್ಯೂರೆವೇರ್ಪುನ್ತೆಕೆ ಮಾಡ ಬೇಕೆಂದೂ ಅಥವಾ ರಾಜೀನಾಮೆ ಕೊಡ ಬೇಕೆಂದೂ ಹೇಳಿದರು.

★

ಗಾಂಧೀಜಿಯವರ ತತ್ವಗಳು

ಗಾಂಧೀಜಿ ಯವರ ತತ್ವಗಳು ಮುತ್ತು ಆದರ್ಶಗಳು ದೇಶದಲ್ಲಿ ಪೂರ್ಣವಾಗಿ ತೊಡೆದುಹಾಕಲಾಗಿವೆಯೆಂದೂ, ಕೇವಲ ಸ್ವಲಾಭಕ್ಕೆ ಉಪಯೋಗಿಸಲಾಗುತ್ತಿದೆಯೆಂದು ಮಂಡ್ಯದಲ್ಲಿ ಶತಮಾನೋತ್ಸವ ಸಂದರ್ಭದಲ್ಲಿ ಪ್ರೊ || ಪೆಸ್ಲಿ ಹೇಳಿದರು

★

ಚುನಾವಣೆ

ನವದೆಹಲಿ— ಬಂಗಾಳ, ಬೀಹಾರ, ಉತ್ತರಪ್ರದೇಶ ಮತ್ತು ಪಂಜಾಬಿನ ಮಧ್ಯಾವಧಿ ಚುನಾವಣೆಯು ಒಟ್ಟಿಗೆ ನವೆಂಬರಿನಲ್ಲಿ ನಡೆಯುವುದು.

★ ತ್ರಿವೇಂಸ್ರಂ— ಹಿಂದಿ ವಿಶ್ವವಿದ್ಯಾ ಚಳವಳ ಮುತ್ತೆ ಪ್ರಾರಂಭವಾಗಲಿದೆ.

ಜೂಜಾಡುತ್ತಿದ್ದವರು

ಹೈದರಾಬಾದು— ನಗರದ ಒಂದು ಪ್ರಮುಖ ಹೋಟಲಿನಲ್ಲಿ ಶನಿವಾರ ಜೂಜಾಡುತ್ತಿದ್ದ 11 ಮಂದಿಯನ್ನು ದಸ್ತಗಿರಿ ಮಾಡಿ ಅವರಲ್ಲಿದ್ದ ರೂ. 50000 ವಶಪಡಿಸಿಕೊಳ್ಳಲಾಯಿತು.

●

ತನ್ನ ಜೀವಕ್ಕಿಂತ ಹೆಚ್ಚು

ನ್ಯಾಗಪುರ— ಸಂತ ತುಕ್ಕೋಜಿ ಮಹಾರಾಜರು ಉಳಿದುಕೊಳ್ಳಲೆಂದು ಕೊಟಂಬ ಗ್ರಾಮದ ಒಬ 20 ವರ್ಷದವನು ಮಜ್ರಿಗಿಗೆ ಫೋಗಿ ಪ್ರಾರ್ಥನೆ ಮಾಡಿ ವಿಷ ಸೇವಿಸಿದ್ದನು — ಸಂತರ ನಿಧನದ ಅರ್ಧ ಗಂಟೆಯ ನಂತರ ಇವನು ಸತ್ತನು.

●

ವಶವಡಿಸಿಕೊಂಡ ಸರಕು

ನವದೆಹಲಿ— ಕೇಂದ್ರ ಕಸ್ಟಂಸ್ ಶಾಖೆಯು ಸೆಪ್ಟಂಬರು ಮಾಹೆಯಲ್ಲಿ 2.00 ಕೋಟಿ ರೂ. ಬೆಲೆಯ ಸರಕುಗಳನ್ನು ವಶಪಡಿಸಿಕೊಂಡಿತು ; ಇದರಲ್ಲಿ ಅಂತರರಾಷ್ಟ್ರೀಯ ಮಾರುಕಟ್ಟೆಯ ಮೌಲ್ಯದ 13.20 ಲಕ್ಷ ಚಿನ್ನವೂ ಸೇರಿದೆ.

★

ವನ್ಯಜೀವಿಗಳು

ಧಾರವಾಡ— ಮನರಂಜನೆಗೆ ಅಥವಾ ಬೇಟೆಗೆ ಪ್ರಾಣಿಗಳನ್ನು ಮಾನವನಿಗೆ ಆಹುತಿ ಮಾಡುವುದು ಪ್ರಕೃತಿ ನ್ಯಾಯಕ್ಕೂ ಅಹಿಂಸಾತತ್ವಕ್ಕೂ ವಿರುದ್ಧವಾಗಿದೆಯೆಂದು ಬೆಳಗಾಂ ಅರಣ್ಯ ಮುಖ್ಯಾಧಿಕಾರಿ ಶ್ರೀ ವೈ. ಎಂ. ಎಲ್. ಶರ್ಮರು ವನಜೀವಿಗಳ ಸಪ್ತಾಹ ಉದ್ಘಾಟಿಸುತ್ತಾ, ಹೇಳಿದರು.

○ ಶುಕ್ರವಾರ— ತಾಲ್ಲೂಕು ಬೋರ್ಡು ಚುನಾವಣೆಯಲ್ಲಿ 15 ಸ್ಥಾನಗಳಿಗೆ 45 ಮಂದಿ ಸ್ಪರ್ಧಿಸಿದ್ದಾರೆ.

ಹರತಾಳ

ಜುನಾಘಡ— ಗುಜರಾತು ವ್ಯವಸಾಯ ವಿಶ್ವವಿದ್ಯಾನಿಲಯದ ಚಳವಳಗಾರರ ಕರೆಯಂತೆ ಶನಿವಾರ ಜುನಾಘಡ ಜಿಲ್ಲೆಯಲ್ಲಿನ ಎಲ್ಲಾ ಪಟ್ಟಣಗಳ ಅಂಗಡಿಗಳು, ವಾಣಿಜ್ಯ ಸಂಸ್ಥೆಗಳು, ಹೋಟಲುಗಳು, ಸ್ಕೂಲುಗಳೂ ಮುಚ್ಚಲ್ಪಟ್ಟಿದ್ದವು — ವಿದ್ಯಾರ್ಥಿಗಳು ಘೋಷಣೆ ಮಾಡುತ್ತಾ ಮೆರವಣಿಗೆ ನಡೆಸಿದರು.

★

ವಿರೋಧವಿಲ್ಲದ ಹೇಳಿಕೆ

ಶ್ರೀನಗರ— ಕೇಂದ್ರ ನೌಕರರ ಮುಷ್ಕರದ ಬಗ್ಗೆ, ಕೇಂದ್ರ ಮುಖ್ಯ ಮಂತ್ರಿ ನಂಬೂದರಿಪಾದರು, ಇಬ್ಬರೂ ಸರಿಯೆಂದು ಜಯಪ್ರಕಾಶನಾರಾಯಣರು ಹೇಳಿದರು.

★

ಅತೃಪ್ತ ಶಿವಸೇನೆ ಸದಸ್ಯ

ಬೊಂಬಾಯಿ— ಥಾನಾ ಮುನಿಸಿಪಾಲಿಟಿ ಮಾಟಂಗಿನಲ್ಲಿದ್ದ ಶಿವಸೇನೆಯ ಅತೃಪ್ತ ಸದಸ್ಯನೊಬ್ಬನನ್ನು ಒಬ್ಬ ಕಾರ್ಮಿಕನು ಚೂರಿಯಿಂದ ಇರಿಯಲು ಪ್ರಯತ್ನಿಸಿದಾಗ ಬಂಧಿಸಿದ ಪೋಲೀಸರಿಗೆ ಸ್ವಲ್ಪ ಗಾಯಗಳಾದವು.

●

ಪಾಂಡಿಚೆರಿ— ಶ್ರೀ ಬಿ. ಡಿ. ಜತ್ತಿಯವರು ಪಾಂಡಿಚೆರಿ ಗೌರ್ನರರಾಗಿ ಅಧಿಕಾರ ಸ್ವೀಕರಿಸಿದರು.

★

ಮದರಾಸು— ಪಾಂಡಿಚೆರಿಯ ಮಾಜಿ ಮುಖ್ಯ ಮಂತ್ರಿ ಕಾಂಗ್ರೆಸ್ಸಿನ ಶ್ರೀ ಫರೂಕ್ ಮರಿಕಾರರು ಡಿಎಂಕೆಗೆ ಸೇರಿದರು.

○

ನವದೆಹಲಿ— ಪಶ್ಚಿಮ ಬಂಗಾಳ, ಭೂತಾನ, ಸಿಕ್ಕಿಂನಲ್ಲಿ ಪ್ರವಾಹಪೀಡಿತರಿಗೆ ವಿಮಾನದಳದವರು ಆಹಾರ ಸರಬರಾಜು ಮಾಡುತ್ತಲೂ, ಪ್ರಯಾಣೀಕರನ್ನು ಸಾಗಿಸುತ್ತಲೂ ಇವೆ.

ರಾಜ್ಯದ ಆಡಳಿತ ಕನ್ನಡದಲ್ಲಿ

ಧಾರವಾಡ— ರಾಜ್ಯದ ಆಡಳಿತದಲ್ಲಿ ಎಲ್ಲಾ ಮಟ್ಟದಲ್ಲಿಯೂ ಕನ್ನಡವು ಅಧಿಕೃತ ಭಾಷೆಯಾಗುವ ಕಾಲ ದೂರವಿಲ್ಲವೆಂದು ವಾರ್ತಾ ಮಂತ್ರಿ ಶ್ರೀ ರಾಜಶೇಖರಮೂರ್ತಿಯವರು ಹೇಳಿದರು.

●

ಪ್ರಧಾನಿ ಇಂದಿರಾರವರ ಭಾಷಣ

ವಿಶ್ವಸಂಸ್ಥೆ— ಅಮೇರಿಕಾವು ವಿಯಟ್ನಾಂನಲ್ಲಿ ಬಾಂಬು ಹಾಕುತ್ತಿರುವದನ್ನು ಪೂರ್ತಾ ನಿಲ್ಲಿಸಬೇಕು ಮತ್ತು ಜಿಕೊಸ್ಲೊವೆಕಿಯಾದಲ್ಲಿ ವಾರ್ಸಾ ಒಪ್ಪಂದ ಶಕ್ತಿಗಳು ತಡಮಾಡದೆ, ಹಿಂದಿನ ಪರಿಸ್ಥಿತಿ ಸ್ಥಾಪನೆಯಾಗುವಂತೆ ಮಾಡಬೇಕು, ಎಂದು ಪ್ರಧಾನಿ ಇಂದಿರಾರವರು ಜನರಲ್ ಅಸೆಂಬ್ಲಿಯಲ್ಲಿ 125 ರಾಷ್ಟ್ರಗಳ ಮುಂದೆ ಮಾಡಿದ ಭಾಷಣದಲ್ಲಿ ಹೇಳಿದರು.

★

ಕಪ್ಪು ಬಾವುಟ ಪ್ರದರ್ಶನ

ಷಿಲಾಂಗ್— ಖ್ಹಾಸಿ ಮತ್ತು ಜೈಂಟಿಯಾ ಬೆಟ್ಟಗಳ ವಿದ್ಯಾರ್ಥಿಗಳು, ಅಲ್ಲಿ ಸ್ವತಂತ್ರ ರಾಜ್ಯ ಸ್ಥಾಪನೆ ಬಗ್ಗೆ ಭಾರತ ಸರಕಾರದ ನಿರ್ಧಾರವನ್ನು ಪ್ರತಿಭಟಿಸಿ ಶಾಂತಿಯುತ ಕಪ್ಪು ಬಾವುಟ ಪ್ರದರ್ಶನ ನಡೆಸಿದರು.

●

13 ಪಕ್ಷಗಳು ಸ್ಪರ್ಧಿಸುವವು

ಲಕ್ನೊ— ಫೆಬ್ರುವರಿಯಲ್ಲಿ ನಡೆಯುವ ಮಧ್ಯಾವಧಿ ಚುನಾವಣೆಯಲ್ಲಿ ಕಡೇ ಪಕ್ಷ 13 ರಾಜಕೀಯ ಪಕ್ಷ 13 ರಾಜಕೀಯ ಪಕ್ಷಗಳು ಸ್ಪರ್ಧಿಸಲಿವೆ.

★

ಖಟ್ಮಂಡು— ಕೀರ್ತಿಪುರದಲ್ಲಿ ತ್ರಿಭುವನ ವಿಶ್ವವಿದ್ಯಾಲಯದಲ್ಲಿ ಗಾಂಧೀ ಸ್ಮಾರಕ ಹಾಸ್ಪಟಲಿನ ಅಸ್ತಿಭಾರ ಶಿಲೆಯನ್ನು ರಾಷ್ಟ್ರಾಧ್ಯಕ್ಷ ಡಾ || ಜಕೀರ್ ಹುಸೇನರು ಸ್ಥಾಪಿಸಿದರು.

ಹಿಂದೂಗಳ ಆಚಾರ

ಗ್ರಾಹಕರು – ಶಾಸ್ತ್ರಧರ್ಮನಿರತ " ಅನಂತನರಸಿಂಹಯ್ಯಂಗಾರ್

(ಮುಂದುವರಿದುದು)

ವರ್ಣಾಶ್ರಮಧರ್ಮವೇ ಎರಡನೆಯದು. ಬ್ರಾಹ್ಮಣಧರ್ಮ, ರಾಜಧರ್ಮ, ಸ್ತ್ರೀಧರ್ಮ ಮುಂತಾದುವೆಲ್ಲಾ ಇದರಲ್ಲಿ ಸಮಾವೇಶವಾಗುತ್ತದೆ. ಆಚಾರವನ್ನು ಚೆನ್ನಾಗಿ ಪಾಲಿಸಬಲ್ಲವನೇ ಈ ಎರಡನೆಯದಾದ ವರ್ಣಾಶ್ರಮಧರ್ಮವನ್ನು ಪಾಲಿಸಬಲ್ಲ, ಅನ್ಯಥಾ ಸಾಧ್ಯವಿಲ್ಲ. ಮೂರನೆಯದೇ ಸಾಮಾನ್ಯಧರ್ಮ. ಸತ್ಯ, ಪ್ರಾಮಾಣಿಕತೆ, ದಯಾ, ಅಹಿಂಸೆ, ಅನಸೂಯತ್ವ ಮುಂತಾದುವೆಲ್ಲಾ ಈ ಧರ್ಮಕ್ಕೆ ಸೇರುತ್ತವೆ. ಆಚಾರ, ಮತ್ತು ವರ್ಣಾಶ್ರಮಧರ್ಮವನ್ನು ಚೆನ್ನಾಗಿ ಪಾಲಸೇ ಮಾಡಬಲ್ಲವನೇ ಈ ಸಾಮಾನ್ಯಧರ್ಮವನ್ನು ಚೆನ್ನಾಗಿ ಪಾಲನೇ ಮಾಡಲು ಸಾಧ್ಯ. ಮೋಕ್ಷಧರ್ಮವೆಂಬುದೇ ನಾಲ್ಕನೆಯ ಧರ್ಮ. ಭಕ್ತಿ, ಜ್ಞಾನ, ವೈರಾಜ್ಯ, ನಿಷ್ಕಾಮಕರ್ಮ, ಧ್ಯಾನ, ಮುಂತಾದುವೆಲ್ಲಾ ಈ ಧರ್ಮದಲ್ಲಿ ಸೇರುತ್ತದೆ. ಈಗಿನವರಿಗೆ ಆಚಾರವನ್ನು ಕಷ್ಟವೆಂದು ಬಿಟ್ಟು, ಮೋಕ್ಷಧರ್ಮವನ್ನು ಸುಲಭವೆಂದು ಆಚರಿಸುತ್ತಿರುವುದು ಹೆಚ್ಚುತ್ತಾ ಬರುತ್ತಿದೆ. ಸಂಧ್ಯಾವಂದನೆ ಮಾಡುವದರಲ್ಲಿ ಆಸಕ್ತಿಯಿಲ್ಲದೇ ಬಿಟ್ಟು ಗೀತಾ ಪಾರಾಯಣ ಮಾಡುವದಕ್ಕೆ ಆರಂಭಿಸಿರುತ್ತಾರೆ. ಇದು ಒಂದನೇ ತರಗತಿಯಲ್ಲಿ ಅಕ್ಷರ ಕಲಿಯುವುದು ಕಷ್ಟವೆಂದು ವಿಶ್ವವಿದ್ಯಾನಿಲಯದ ತರಗತಿಗೆ ಹೋಗಿ ಕೂರುವ ವಿದ್ಯಾರ್ಥಿಯಂತಾಗುತ್ತದೆ. ಇದರಿಂದ ತಮಗೆ ತಾವೇ ಮೋಸ ಹೋಗುತ್ತಾರಷ್ಟೆ.

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H.H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah, Sri Madhav Shenoi, Sri Opera Talkies, Padmabhushana Dr. M. C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It is welknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore-4.

Cow Slaughter should be banned Immediately

Help The Gorakshana

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysoe 4

ಪುಡ್‌ಲಾಂಡ್ಸ್ ಜನಪ್ರಿಯ 5 ನೇ ವಾರ
ವೈಭವ ಆರಂಭ

ಮನಮೋಹಕ ಹಿಂದಿ ಚಿತ್ರ — — ಈಸ್ಟ್‌ಮನ್ ಕಲರ್

ನೀಲ್ ಕಮಲ್ Neel Kamal

.... ಮಿಲಿಟುಗಟ್ಟಿ ಕೂಪಾಯಿನ ಅತ್ಯಾಕರ್ಷಣೀಯ ಹಿಂದಿ ಚಿತ್ರ ....

ತಾರಾಗಣ— ವಹಿದಾ ರಹಿಮಾ, ಮನೂಜ್‌ಕುಮಾರ್, ರಾಜ್‌ಕುಮಾರ್ ಬಾಳ್‌ರಾಜ್ ಸಹಾನಿ, ಲಲಿತಾ ಪವಾರ್, ಡೇವಿಡ್, ಕಿತಿಕಲಾ, ಮಹಮೂದ್

ಆಪೆರ— - 11-10-68 ರಿಂದ

ಮನಮೋಹಕ ತಮಿಳು ಚಿತ್ರ — — ದಿನವಹಿ 3 ಆಟಗಳು

ನೇರ್‌ವಳಿ

ನಟವರ್ಗ– ಜಯಶಂಕರ್, ಆನಂದ್, ಮನೋಹರ್, ನಾಗೇಶ್, ಸುಂದರರಾಜ್ ವಾಣಿಶ್ರೀ, ಚಂದ್ರಿಕಾ, ಮನೋರಮ, ವಿಜಯಲಲಿತ

Printing — Neat Binding

Lakshminarasimha Press

Sivarampet, Mysore

SHAKTI

SUDHA

A Superb Tonic

Protect the Cow

ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚಾಗಿ ನಡೆಯಲಿ